## <u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>

## <u>ಸಿ.ಸಿ.ನಂಃ 1177/2024</u>

**<u>ಫಿರ್ಯಾದುದಾರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

:**ವಿರುದ್ಧ**:

**<u>ಆರೋಪಿಃ</u>** ಶ್ರೀ ಸಾಧಿಕ್ ಬಾಷಾ,
ಬಿನ್ ಶ್ರೀ ಅಮೀರ್ ಜಾನ್,
28 ವರ್ಷ,
ವಾಸ : ಮಾಕನಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

## <u>ಆಪಾದನೆಯ ಸಾರಾಂಶ</u>

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆಃ

ದಿನಾಂಕ 01.01.2023 ರಂದು ರಾತ್ರಿ 8.30 ಗಂಟೆಯಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಬಕ್ಕಾಂಬೂದಿ–ಮಾಕನಹಳ್ಳಿ ಮಧ್ಯದಲ್ಲಿ ಕೆರೆ ಏರಿಯ ಮೇಲೆ ಇರುವ ರಾಜ್ಯ ಹೆದ್ದಾರಿ–76 ರ ರಸ್ತೆಯ ಬಳಿ ನೀವು ಆರೋಪಿ ಕೆಎ.14.ಇಎಸ್.5876 ರ ಬಜಾಜ್ ಸಿಟಿ–100 ಮೋಟಾರು ಬೈಕನ್ನು ಮಾಕನಹಳ್ಳಿ ಕಡೆಯಿಂದ ಬುಕ್ಕಾಂಬೂದಿ ಕಡೆಗೆ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಬುಕ್ಕಾಂಬೂದಿ ಕಡೆಯಿಂದ ಮಾಕನಹಳ್ಳಿ ಕಡೆಗೆ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ಬಡಿಚೆರ್ಲಾ ಉದಯ ಶಂಕರ್ ರವರಿಗೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿ ಅಪಘಾತಪಡಿಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರ ಅನ್ವಯ

ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಮೋಟಾರು ಬೈಕನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಡಿಚೆರ್ಲಾ ಉದಯ್ ಶಂಕರ್ ರವರಿಗೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿದ ಪರಿಣಾಮ ಅವರ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 02.01.2023 ರಂದು ರಾತ್ರಿ 9.00 ಗಂಟೆಗೆ ಮೃತಪಟ್ಟಿರುತ್ತಾರೆ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ) ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಮೋಟಾರು ಬೈಕನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಡಿಚೆರ್ಲಾ ಉದಯ್ ಶಂಕರ್ ರವರಿಗೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿದ ಪರಿಣಾಮ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದ ಚಾಸಾ-8/ ಶ್ರೀ ಇಸ್ಮಾಯಿಲ್ ಜಬೀವುಲ್ಲಾ ರವರ ತಲೆಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 337 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಪ್ರಶ್ನೆ:1-** ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

**ಉತ್ತರ:** Yes

**ಪ್ರಶ್ನೆ:2-** ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

**ಉತ್ತರ:** Pleaded not guilty and claimed to be tried

(ಈ ಮೇಲ್ಕಂಡ ಅಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ದಿನಾಂಕಃ 29.01.2025.** **ಸಹಿ/-**

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾದಂ., ತರೀಕೆರೆ**

**ಆರೋಪಿಯ ಸಹಿಃ**